ಕರ್ನಾಟಕ ಸರ್ಕಾರ

ಸಂಖ್ಯೆ:ಡಿಟಿಇ/294/ಇ.ಎಸ್.ಟಿ (7)/2025

ಆಯುಕ್ತರರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು – 560001.
ದಿನಾಂಕ:25-04-2025.

## ಸುತ್ತೋಲೆ

**ವಿಷಯ:** ಕೆಲಸ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ)2013 ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ:**
1. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಟಿಇ/173/ಇ.ಎಸ್.ಟಿ(7)/2022 ದಿ:15.03.2023.
2. ಸರ್ಕಾರದ ಅನಧಿಕೃತ ಟಿಪ್ಪಣಿ ಸಂಖ್ಯೆ: ಹೆಚ್ ಡಿ 214 ಸಿಒಡಿ 2024 ದಿ:22.04.2025.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಇಲಾಖಾ ವ್ಯಾಪ್ತಿಯಡಿಯಲ್ಲಿನ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ / ಅನುದಾನಿತ ಕಾಲೇಜುಗಳ ಪ್ರಾಂಶುಪಾಲರಿಗೆ ತಿಳಿಸುವುದೇನೆಂದರೆ ಮಹಿಳೆಯರು ಸುರಕ್ಷಿತವಾಗಿ ಕೆಲಸ ನಿರ್ವಹಿಸುವ ವಾತಾವರಣವನ್ನು ಕಲ್ಪಿಸಲು POSH ಕಾಯ್ದೆ 2013ನ್ನು ನೀಡಿದ ನಿರ್ದೇಶನಗಳನ್ವಯ ಮಹಿಳಾ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ ಅತ್ಯಾಚಾರ ನಿಯಂತ್ರಿಸುವ ಮತ್ತು ವರದಿ ನೀಡುವ ತಜ್ಞರ ಸಮಿತಿಯ ಅಂತಿಮ ವರದಿಯ ಶಿಫಾರಸ್ಸುಗಳು ಹಾಗೂ ರಾಷ್ಟ್ರೀಯ ಮಹಿಳಾ ಆಯೋಗವು ಸೂಚಿಸಿರುವಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ (ಕೈಗೊಳ್ಳಬೇಕಾದ ಕ್ರಮಗಳ- ಪಟ್ಟಿ ಲಗತ್ತಿಸಿದೆ) ಹಾಗೂ ಸಮಿತಿಯು ಈ ಎಲ್ಲಾ ಸುತ್ತೋಲೆಗಳನ್ನು ಉಲ್ಲೇಖ(1) ರಂತೆ ರಚಿಸಿರುವ ಲೈಂಗಿಕ ಕಿರುಕುಳ ನಿವಾರಣಾ ಸಮಿತಿಯ ಸಂಚಾಲಕರಿಗೆ ಒದಗಿಸುವುದು ಮತ್ತು ಸರ್ಕಾರದ ನಿರ್ದೇಶನಗಳನ್ವಯ ಕಾರ್ಯ ನಿರ್ವಹಿಸುವಂತೆ ತಿಳಿಸಲು ಮತ್ತು ಸಮಿತಿಯು ಸಕ್ರಿಯವಾಗಿರುವುದನ್ನು ಪರಿಶೀಲಿಸಲು ಸೂಚಿಸಲಾಗಿದೆ. ಉಲ್ಲೇಖ(2)ರ ಶ್ರೀ ವಿ ಎಸ್ ಉಗ್ರಪ್ಪರವರ ಅಧ್ಯಕ್ಷತೆಯ ತಜ್ಞರ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನದ ಕುರಿತು ಇಲಾಖೆಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮದ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದೆ.

ಸದರಿ ಸಂಬಂಧ ನೀಡಲಾಗಿರುವ Google Link ನಲ್ಲಿ ನಮೂದಿಸಿರುವ ಅಂಶಗಳಿಗೆ ತಪ್ಪದೇ ದಿ:25.04.2025 ಅಪರಾಹ್ನ 5:00 ಗಂಟೆಗೆ ಒಳಗೆ ಕ್ರಮವಾಗಿ ವರದಿ ಸಲ್ಲಿಸಲು ಸೂಚಿಸಿದೆ. ಹಾಗೂ ಸದರಿ ವಿಷಯಕ್ಕೆ ಸಂಬಂದಿಸಿದಂತೆ ತಮ್ಮ ಸಂಸ್ಥೆಯ ಹಂತದಲ್ಲಿ ಕಿರುಚಿತ್ರ, Cartoon, ಹಾಡು , ಕಥೆ ಮತ್ತು ಇತರ ದೃಶ್ಯ ಮಧ್ಯಮಗಳನ್ನು ಸೂಕ್ತವಾಗಿ ಬಳಸಿ ತಿಳುವಳಿಕೆ ನೀಡಿದ್ದಲ್ಲಿ, ದಾಖಲಾತಿಗಳೊಂದಿಗೆ ಸಲ್ಲಿಸಲು ಸೂಚಿಸಿದೆ.

https://docs.google.com/forms/d/e/1FAIpQLSenWhPLDLQFyslay7F5skXSNjpLozn0zz7UzoHo0UrMB-Xnyw/viewform?usp=header

ನಿರ್ದೇಶಕರು

(............2)

Scanned with CamScanner

ಇವರಿಗೆ,

ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ / ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಪ್ರತಿ:ಮಾಹಿತಿಗಾಗಿ

1) ರಿಜಿಸ್ಟ್ರಾರ್ (ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2) ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3) ಆಯುಕ್ತರ ಆಪ್ತ ಶಾಖೆಗೆ.
4) ನಿರ್ದೇಶಕರ ಆಪ್ತಶಾಖೆಗೆ.
5) ಜಂಟಿ ನಿರ್ದೇಶಕರು(ಅಡಳಿತ) ಆಪ್ತ ಶಾಖೆಗೆ.
6) ಕಛೇರಿ ಪ್ರತಿ.

Scanned with CamScanner